ಪಡೆಯುವುದಕ್ಕೆ ಆಗುತ್ತದೆ. ಮತ್ತು ವಿಕೇಂದ್ರೀಕರಣ ಆದರೆ ಸಾಲದು ವಿಕೇಂದ್ರೀಕರಣ ಆಗಿ ಆ ಕೊನೆ ಮಟ್ಟದಲ್ಲಿರತಕ್ಕಂಥ ಮನುಷ್ಯನಿಗೂ ಕೂಡ ಅಧಿಕಾರ ಹೋಗಬೇಕು.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ: ನಾನು ಅತ್ಯಂತ ಗೌರವದಿಂದ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಬಳಸಿದ ಭಾಷೆಯನ್ನು ನಾನು ಬಳಸುವುದಿಲ್ಲ. ಇದರಲ್ಲಿ ಅವರು ಸಭಾ ನಾಯಕರಾಗಿ ಇಲ್ಲಿ ರಾಜಕೀಯವನ್ನು ತೂರಿಸತಕ್ಕಂಥ ಪ್ರಯತ್ನ ಏನು ಮಾಡಿದರು ಅದನ್ನು ಅವರು ಮಾಡಕೂಡದು. ಚರ್ಚೆಗೆ ಮುಕ್ತವಾದ ಒಂದು ಅವಕಾಶ ಇದೆ ಎಂದು ಹೇಳಿದ್ದಾರೆ. ಅದಕ್ಕಿಂತ ವಿಶೇಷವಾಗಿ 58ನೇ ನಿಯಮದ ಪ್ರಕಾರ ಕೊಟ್ಟಿರತಕ್ಕಂಥಾದ್ದನ್ನು ನಿಲುವಳಿ ಸೂಚನೆಯನ್ನು ಚರ್ಚೆಗೆ ಕೊಟ್ಟಿದ್ದೀರಿ ಎಂದು ಹೇಳಿಬಿಟ್ಟಿದ್ದೀರಿ. ಆದ್ದರಿಂದ ನಮ್ಮ ಬಾಯಿ ಕಟ್ಟಿದೆ. ಇಲ್ಲದಿದ್ದರೆ ಮುಖ್ಯಮಂತ್ರಿಗಳಿಗೆ ನಾವು ಉತ್ತರ ಕೊಡಬಹುದಿತ್ತು. ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ. ಅದಕ್ಕಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ. ನಾವು ಈಗ ಇದನ್ನು ಒತ್ತಾಯ ಮಾಡುವುದಿಲ್ಲ. ಈ ಪ್ರಶ್ನೋತ್ತರ ಆದಮೇಲೆ ಇದನ್ನು ತೆಗೆದುಕೊಳ್ಳಿ.

ಅಧ್ಯಕ್ಷರು: ಆಯಿತು ಈಗ ಪ್ರಶ್ನೋತ್ತರವೇಳಿ.

ಚುಕ್ಕೆಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಲೆವಿ ಸಕ್ಕರೆಯ ಎತ್ತುವಳಿ

506 - ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗಪಟ್ಟಣ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಾರ್ವಜನಿಕ ಪಡಿತರ ಸರಬರಾಜು ಯೋಜನೆಯನ್ವಯ ಸರಬರಾಜಾಗುತ್ತಿರುವ ಲೆವಿ ಸಕ್ಕರೆಯನ್ನು ಆಯಾಯ ಜಿಲ್ಲೆಗಳ ಅಥವಾ ಹತ್ತಿರದ ಜಿಲ್ಲೆಗಳ ಸಕ್ಕರೆ ಕಾರ್ಖಾನೆಗಳಿಂದ ನೀಡದೆ ಬೀದರ್ ಜಿಲ್ಲೆಗೆ ಮಂಡ್ಯ ಜಿಲ್ಲೆಯಿಂದ ಮಂಡ್ಯ ಜಿಲ್ಲೆಯವರಿಗೆ ಬೆಳಗಾಂ ಜಿಲ್ಲೆಯಿಂದ ಎತ್ತುವಳಿ ಮಾಡಲು ಆದೇಶ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದರಿಂದ ಸಗಟು ಮಾರಾಟದಾರರಿಗೆ ಅದರಲ್ಲೂ ತಾಲ್ಲೂಕು ಮಾರಾಟ ಸಹಕಾರ ಸಂಘಗಳಿಗೆ ಸಾಗಾಣಿಕೆಯ ವೆಚ್ಚದಲ್ಲಿ ನಷ್ಟವಾಗುತ್ತಿದ್ದು ಇದರಿಂದಾಗಿ ಸಂಘಗಳು ನಷ್ಟದಲ್ಲಿರುತ್ತವೆಯೇ?

ಇ) ಸಗಟು ಮಾರಾಟದಾರರಿಗೆ ಎತ್ತುವಳಿ ಆದೇಶ ನೀಡುವಾಗ ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದವರಿಗೆ ಮತ್ತು ಇತರರಿಗೆ ತಾರತಮ್ಯ ಮಾಡಲಾಗುತ್ತಿದೆಯೇ?

ಈ) ಹಾಗಿದ್ದಲ್ಲಿ, ತಾಲ್ಲೂಕು ಮಾರಾಟ ಸಹಕಾರ ಸಂಘಗಳಿಗೆ ಆಗುತ್ತಿರುವ ನಷ್ಟವನ್ನು ಸರ್ಕಾರ ತುಂಬಿಕೊಡುವ ಯೋಜನೆ ಇದೆಯೇ?

ಉ) ಹಾಗಿಲ್ಲದಿದ್ದಲ್ಲಿ ಸರ್ಕಾರದ ನೀತಿಯಿಂದ ಆಗುವ ನಷ್ಟಕ್ಕೆ ಯಾರು ಜವಾಬ್ದಾರರು?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಸಾರ್ವಜನಿಕ ಪಡಿತರ ಸರಬರಾಜು ಯೋಜನೆಯನ್ವಯ ಸರಬರಾಜಾಗುತ್ತಿರುವ ಲೆವಿ ಸಕ್ಕರೆಯನ್ನು ಆಯಾಯಾ ಜಿಲ್ಲೆಯ ಅಥವಾ ಹತ್ತಿರದ ಜಿಲ್ಲೆಗಳ ಸಕ್ಕರೆ

ಕಾರ್ಖಾನೆಗಳಿಂದ ಸಾಧ್ಯವಾದಷ್ಟು ಮಟ್ಟಿಗೆ ನೀಡಲಾಗುತ್ತಿದೆ. ಆದರೆ ಮಂಡ್ಯ ಜಿಲ್ಲೆಯವರಿಗೆ ಬೆಳಗಾಂ ಜಿಲ್ಲೆಯಿಂದ ಎತ್ತುವಳಿ ಮಾಡಲು ಯಾವಾಗಲೂ ಹಂಚಿಕೆ ಮಾಡಿಲ್ಲ. ಅದೇ ರೀತಿ ಬೀದರ್ ಜಿಲ್ಲೆಗೆ ಮಂಡ್ಯ ಜಿಲ್ಲೆಯಿಂದ ಹಂಚಿಕೆ ಮಾಡಿಲ್ಲ. ಸಾಧ್ಯವಾದಷ್ಟು ಮಟ್ಟಿಗೆ ಅಕ್ಕಪಕ್ಕದ ಕಾರ್ಖಾನೆಗಳಿಂದಲೇ ಎತ್ತುವಳಿ ಮಾಡಲು ಹಂಚಿಕೆ ಮಾಡಲಾಗುತ್ತಿದೆ.

ಸಗಟು ಕೇಂದ್ರದಿಂದ ಕಾರ್ಖಾನೆಗೆ ಇರುವ ದೂರಕ್ಕೆ ಅನುಗುಣವಾಗಿ ಸಾಗಾಣಿಕೆ ವೆಚ್ಚವನ್ನು ಸರ್ಕಾರದ ಆದೇಶ ಸಂ.ಎಫ್‌ಟಿಡಿ 1 ಎಫ್‌ಟಿಆರ್ 90 ದಿನಾಂಕ 16.5.91ರ ಮೇರೆಗೆ ನೀಡಲಾಗುತ್ತಿದೆ.

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ.

ಶ್ರೀಮತಿ ದಮಯಂತಿ ಬೋರೇಗೌಡ: ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಅಯಾಯಾ ಜಿಲ್ಲೆಗಳಲ್ಲೇ ನಾವು ಅದಷ್ಟು ಅಲಾಟ್ ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಆ ರೀತಿ ಆಗುತ್ತಿಲ್ಲ. ಬಹುಶಃ ತಾವು ಯಾವಾಗ ಈ ರೀತಿಯ ಸುಧಾರಣೆ ತರುತ್ತೀದ್ದೀರಿ ಎಂಬುದನ್ನು ಹೇಳಬೇಕು.

ಶ್ರೀಮತಿ ಮನೋರಮ ಮಧ್ವರಾಜ್: ಮಾನ್ಯ ಅಧ್ಯಕ್ಷರೇ ಮಂಡ್ಯ ಜಿಲ್ಲೆಯ ಮಟ್ಟಿಗೆ ಹೇಳುವುದಿದ್ದರೆ ಕಳೆದ 6 ತಿಂಗಳ ವರದಿ ನನ್ನ ಹತ್ತಿರ ಉಂಟು. ಅಕ್ಟೋಬರ್ 93ರಲ್ಲಿ ಮಂಡ್ಯದಿಂದಲೇ ಪಾಂಡವಪುರ ಗಂಗಾವತಿ. ಮತ್ತು ಸಮೀರವಾಡಿ ಅಂದರೆ ಬಿಜಾಪುರ ಜಿಲ್ಲೆಯಿಂದ ಒಂದು ಸಾರಿ ಬಿಟ್ಟರೆ ಮತ್ತೆ ನವೆಂಬರ್ 93ರಲ್ಲಿ ಮಂಡ್ಯ ಚಾಮುಂಡೇಶ್ವರಿ ಮತ್ತು ಹೇಮಾವತಿ, ಡಿಸೆಂಬರ್ 93ರಲ್ಲಿ ಮಂಡ್ಯ ಚಾಮುಂಡೇಶ್ವರಿ ಕೊಳ್ಳೆಗಾಲ ಕೆ.ಆರ್. ನಗರ ಮತ್ತು ದಾವಣಗೆರೆ, 94ರಲ್ಲಿ ಚಾಮುಂಡೇಶ್ವರಿ, ಮಂಡ್ಯ ಕೊಳ್ಳೇಗಾಲ, ಫೆಬ್ರವರಿ 94 ರಲ್ಲಿ ಮಂಡ್ಯ ಚಾಮುಂಡೇಶ್ವರಿ, ಭದ್ರಾವತಿ, ಮಾರ್ಚಿ 94 ರಲ್ಲಿ ಮಂಡ್ಯ ದಾವಣಗೆರೆ

ಶ್ರೀಮತಿ ದಮಯಂತಿ ಬೋರೇಗೌಡ: ಮಾನ್ಯ ಅಧ್ಯಕ್ಷರೇ, ಮಂಡ್ಯದಲ್ಲಿ 3 ಸಹಕಾರ ಸಕ್ಕರೆ ಕಾರ್ಖಾನೆಗಳು ಇದ್ದರೂ ಸಹ ಹೊರಗಡೆ ತರುವಂತಹ ಅವಶ್ಯಕತೆ ಏನು ಇದೆ?

ಶ್ರೀಮತಿ ಮನೋರಮ ಮಧ್ವರಾಜ್: ಆ ಸಕ್ಕರೆ ಸಾಕಾದರೆ ನಮ್ಮದೇನೂ ಅಭ್ಯಂತರ ಇಲ್ಲ. ಅದು ಏನೋ ವಿಶೇಷ ಕಾರಣಗಳಿಂದ ಇಲ್ಲಿಂದ ತರಿಸಿರಬಹುದು. ನಾನು ಅಧಿಕಾರಿಗಳ ಹತ್ತಿರ ಸಮಾಲೋಚನೆ ಮಾಡಿ ಅದಷ್ಟು ಮಟ್ಟಿಗೆ ಮಂಡ್ಯದಿಂದಲೇ ಸರಬರಾಜು ಮಾಡುವ ಹಾಗೆ ಸೂಚಿಸುತ್ತೇನೆ.

ಶ್ರೀ ಡಿ. ಹಲಗೇಗೌಡ: ಮಾನ್ಯ ಅಧ್ಯಕ್ಷರೇ, ನಾನು ಹೇಳತಕ್ಕಂಥಾದ್ದು ಈ ಪಾಂಡವಪುರಕ್ಕೆ ಸಂಕೇಶ್ವರದಿಂದ ಸಂಕೇಶ್ವರದಿಂದ ಚಾಮುಂಡೇಶ್ವರಿಗೆ ಹೀಗೆ ಅನೇಕ ವೇಳೆ ಆಗುತ್ತಿದೆ. ಇದಕ್ಕೆ ಸಾರಿಗೆ ಖರ್ಚು ಬೀಳುವುದಿಲ್ಲವೇ? ಅದನ್ನು ತರಬೇಕಾದರೆ ಎಷ್ಟು ತೊಂದರೆ ಆಗುತ್ತದೆ. ಇಲ್ಲಿಂದಲೇ ಸಕ್ಕರೆ ತೆಗೆದುಕೊಂಡು ಅಕ್ಕಪಕ್ಕದ ಜಿಲ್ಲೆಗಳನ್ನು ಹೊಂದಾಣಿಕೆ ಮಾಡಿಕೊಂಡು ಅದಷ್ಟು ಹತ್ತಿರ ಕೊಡತಕ್ಕಂಥಾದ್ದು ಒಳ್ಳೆಯ ವ್ಯವಸ್ಥೆ ಅಲ್ಲವೇ? ಏಕೆ ಈ ರೀತಿ ಮಾಡುತ್ತಾರೆ? ಇದು ಸರ್ಕಾರದ ಗಮನಕ್ಕೆ ಬರುತ್ತದೆಯೇ ಒಳ್ಳೆಯ ವ್ಯವಸ್ಥೆ ಅಲ್ಲವೇ? ಏಕೆ ಈ ರೀತಿ ಮಾಡುತ್ತಾರೆ? ಇದು ಸರ್ಕಾರದ ಗಮನಕ್ಕೆ ಬರುತ್ತದೆಯೇ

ಶ್ರೀಮತಿ ಮನೋರಾಮ ಮಧ್ವರಾಜ್ : ನಾನು ಈಗಾಗಲೇ ಹೇಳಿದ್ದೇನೆ. ಆದಷ್ಟು ಮಟ್ಟಿಗೆ ಮಂಡ್ಯ ಜಿಲ್ಲೆಯಿಂದಲೇ ಸಕ್ಕರೆ ಕೊಡುವ ಹಾಗೆ ಪ್ರಯತ್ನ ಮಾಡುತ್ತೇನೆ.

ಮಹಾಜನ ಆಯೋಗದ ನೇಮಕ ಹಾಗೂ ವರದಿಯ ಅನುಷ್ಠಾನ

526 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಹಾರಾಷ್ಟ್ರ - ಕರ್ನಾಟಕ ನಡುವಿನ ಗಡಿ ವಿವಾದದ ಬಗ್ಗೆ ವರದಿಯನ್ನು ನೀಡಲು ಮಹಾಜನ್ ಆಯೋಗವನ್ನು ಯಾವಾಗ ನೇಮಿಸಲಾಯಿತು?

ಆ) ಆ ಸಮಿತಿಯು ಎಂದು ತನ್ನ ವರದಿಯನ್ನು ನೀಡಿತು.

ಇ) ಆ ವರದಿಯಲ್ಲಿನ ಮುಖ್ಯ ಅಂಶಗಳೇನು?

ಈ) ಈ ವರದಿಯಲ್ಲಿ ರಾಜ್ಯದ ಹಿತಾಸಕ್ತಿಗೆ ಅನುಕೂಲವಾಗುವ ಶಿಫಾರಸುಗಳಿರುವುದು ನಿಜವೇ?

ಉ) ಹಾಗಿದ್ದಲ್ಲಿ ಆ ವರದಿಯನ್ನು ಜಾರಿಗೊಳಿಸುವಂತೆ ಎಷ್ಟು ಬಾರಿ ಕೇಂದ್ರದ ಮೇಲೆ ಒತ್ತಡ ತರಲಾಗಿದೆ?

ಊ) ಎಷ್ಟು ಬಾರಿ ವಿಧಾನಮಂಡಲದಲ್ಲಿ ಅವಿರೋಧ ನಿರ್ಣಯಗಳನ್ನು ಮಾಡಿ ಕಳುಹಿಸಿಕೊಡಲಾಗಿದೆ?

ಋ) ಇತ್ತೀಚೆಗೆ ಮಹಾರಾಷ್ಟ್ರದ ಸಚಿವರೊಬ್ಬರು ಆ ಬಗ್ಗೆ ಪ್ರಸ್ತಾಪಿಸಿರುವುದರಿಂದ ಮತ್ತೆ ಕೇಂದ್ರದ ಮೇಲೆ ಒತ್ತಡ ಹೇರಲು ರಾಜ್ಯ ಸರ್ಕಾರವು ಸರ್ವ ಪಕ್ಷಗಳ ನಿಯೋಗವನ್ನು ಕರೆದೊಯ್ಯುವುದೇ?

ೠ) ಇಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿ) :

ಅ) 25.10.1966

ಆ) 25.8.1967

ಇ) ವರದಿಯ ಮುಖ್ಯಾಂಶಗಳನ್ನು ಲಗತ್ತಿಸಿದೆ.

ಈ) ಹೌದು

ಉ) ಒಂಬತ್ತು ಬಾರಿ.

ಊ) ನಾಲ್ಕು ಬಾರಿ

ಋ) ಇಲ್ಲ

ೠ) ಈಗಾಗಲೇ ಕರ್ನಾಟಕ ವಿಧಾನಮಂಡಲವು ಸರ್ವಾನುಮತದಿಂದ ವರದಿಯನ್ನು ಜಾರಿಗೊಳಿಸಬೇಕೆಂದು ಗೊತ್ತುವಳಿಯನ್ನು ಸ್ವೀಕರಿಸುವುದರಿಂದ ಸರ್ವಪಕ್ಷಗಳ ನಿಯೋಗವೊಂದನ್ನು ಕರೆದುಕೊಂಡು ಹೋಗುವ ಅವಶ್ಯಕತೆ ಇಲ್ಲ.

EXTRACT OF THE SUMMARY OF THE RECOMMENDATION OF THE MAHAJAN COMMISSION

The Following areas are recommended for transfer from the state of Mysore to the state of Maharashtra.

i) the town of Nipani with 40 villages of the Nipani Bhag in Chikodi taluka of Belgaum district. The population recommended for transfer is 1,17,783